

ಸಿಕ್ಕಿಕೊಂಡಂತೆ ವಿಲವಿಲ ಒದ್ದಾಡುತ್ತಾ ಎರಡು ಮೂರು ಮಾತಲ್ಲಿ ತನ್ನ ಬದುಕಿನ ಅತೃಪ್ತಿ, ಅಸಮಾಧಾನಗಳನ್ನು ಹೊರಹಾಕುವ ಅವನ ಬಗ್ಗೆ ಅಯ್ಯೋ ಪಾಪ ಎನ್ನಿಸತೊಡಗಿತ್ತು. ಇದಾಗಿ ಮೂರು ದಿನಗಳ ತರುವಾಯ ಪ್ರಮಥನಾಥನ ಕರೆ ಬಂತು. 'ನೀನಿವತ್ತು ಸಿಗಲೇಬೇಕು. ಊಟಕ್ಕೆ ಹೋಗೋಣ. ಪ್ಲೀಸ್ ಆಗಲ್ಲ ಅನ್ನಬೇಡ' ಎಂದ. ಭಾನುವಾರದ ಮಧ್ಯಾಹ್ನ ಒಂದೊಳ್ಳೆ ನಿದ್ದೆ ತೆಗೆದು ಸಂಜೆಗೆ ಕಣ್ಣುಮೂಗಲ್ಲಿ ನೀರು ಸುರಿಯುವಷ್ಟು ಖಾರದ ಗೋಬಿ/ಬೇಬಿ ಮಂಚೂರಿ ತಿನ್ನುವ ಪ್ಲಾನಲ್ಲಿ ಇದ್ದವಳಿಗೆ ಈವಯ್ಯನ ರಿಕ್ವೆಸ್ಟು ರೇಜಿಗೆ ಹುಟ್ಟಿಸಿತ್ತು.

ಮೂಲೆಯ ಸೀಟು ಹಿಡಿದು ಎರಡು ನಾರ್ತ್ ಇಂಡಿಯನ್ ಮೀಲ್ಸ್ ಆರ್ಡರ್ ಮಾಡಿ ಊಟಕ್ಕೆ ಕಾಯುವಾಗಲೇ ಪ್ರಮಥನಾಥ ಕಥೆ ಶುರು ಮಾಡಿದ್ದ.

'ನನ್ನ ಕೆಲಸದಿಂದ ತೆಗೆದು ಹಾಕ್ತಿದ್ದಾರೆ ಶಮೀ...ಸೆಂದಿಲ್‌ಗೆ ಅವತ್ತು ಹಾರ್ಟ್ ಅಟ್ಯಾಕ್ ಆಗಿ ಆಸ್ಪತ್ರೆ ಸೇರಿದ್ದಾನಂತೆ. ಅವನ ಹೆಂಡತಿ ನೋಡಲು ಬಂದವರೆಲ್ಲರ ಹತ್ತಿರ, 'ಪ್ರಮಥನಾಥ ರೊಚ್ಚಿಗೆಬ್ಬಿಸಿದ್ದಕ್ಕೇ ಹೀಗಾಗಿದ್ದು. ನಲ್ವತ್ತು ವರ್ಷ ಯಾವ ಮಹಾ ವಯಸ್ಸು? ಇವನಿಗೇನಾದರೂ ಆಗಿದ್ದರೆ ನನ್ನ ಇಬ್ಬರು ಮಕ್ಕಳ ಗತಿಯೇನು? ಆ ರಾಸ್ಕಲ್ ನನ್ನ ನಡತೆ ಬಗ್ಗೆ ಮಾತಾಡಿದನಂತೆ. ಒಳ್ಳೇದಾಗುತ್ತಾ ಅವನಿಗೆ? ಬಾಯಲ್ಲಿ ಹುಳ ಬಿದ್ದು ಸಾಯ್ತಾನೆ' ಅಂತ ಇಟ್ಕೊಂಡಿರೋನ್ನ ಪಕ್ಕದಲ್ಲಿ ನಿಲ್ಲಿಸಿಕೊಂಡೇ ಹೇಳ್ತಿದ್ದಾಳಂತೆ. ಅವನೇನೂ ಸಾಚಾ ಅಲ್ಲ. ಸೆಂದಿಲ್ ತಮಿಳುನಾಡಿಗೆ ಹೋದಾಗ ಇವರ ಮನೆಯಲ್ಲೇ ಠಿಕಾಣಿ ಹೂಡಿದ್ದು ಅಪಾರ್ಟ್ಮೆಂಟಿನ ಸಮಸ್ತರಿಗೂ ಗೊತ್ತು' ಅವನ ಉದ್ವೇಗ ಧ್ವನಿಯಲ್ಲಿ ಕಂಪಿಸುತ್ತಿತ್ತು.

'ಅದು ಅವರ ಪರ್ಸನಲ್ ವಿಷಯ ಅಲ್ವಾ? ನೀವು ನಿಮ್ಮದಲ್ಲದ ವಿಷಯಕ್ಕೆ ಮೂಗು ತೂರಿಸ್ತಾ ಇದ್ದೀರಿ ಅನ್ನಿಸ್ತಿಲ್ವಾ? ಯಾವುದಾದರೂ ಹೆಣ್ಣಿನ ನಡತೆ ಬಗ್ಗೆ ಮಾತಾಡೋದು ಚೀಪ್ ಅಂತ ಗೊತ್ತಿರಬೇಕಿತ್ತು ನಿಮಗೆ' ಈಗ ಅಯ್ಯೋ ಅಂದರೆ ಇನ್ನು ಯಾವತ್ತಿಗೂ ಈವಯ್ಯ ತಿದ್ಕೊಳ್ಳಲ್ಲ ಅನ್ನಿಸಿ ಗಡುಸಾಗಿಯೇ